# ದೇವರ ಮೀನುಗಳ ಸ್ಮಾರಕ

ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಶಿಶಿಲವು ಕಪಿಲಾ ನದಿಯ ತಟದಲ್ಲಿರುವ ಶಿಶಿಲೇಶ್ವರ ದೇವಾಲಯಕ್ಕೆ ಪ್ರಸಿದ್ಧಿಯಾಗಿದೆ. ಇಲ್ಲಿ ನದಿಯಿಂದ ರೂಪುಗೊಂಡ ಕಲ್ಯಾಣಿಯಲ್ಲಿ ದೇವರ ಮೀನುಗಳೆಂದು ಕರೆಯುವ ಮಹಾಸೀರ್ ಜಾತಿಯ ವಿಶೇಷ ಮೀನುಗಳು ಸಮೃದ್ಧವಾಗಿವೆ. ನದಿಯಲ್ಲಿ ಮಿಂದು, ಶಿಶಿಲೇಶ್ವರ ಮಂದಿರದಲ್ಲಿ ಹರಕೆ ಸಲ್ಲಿಸಿ, ಈ ಮೀನುಗಳಿಗೆ ಆಹಾರ ನೀಡಿದರೆ ಚರ್ಮರೋಗಗಳಿಂದ ಮುಕ್ತಿ ದೊರೆಯುತ್ತದೆ ಎಂಬ ನಂಬಿಕೆಯಿದೆ. ಬೃಹತ್ ಪ್ರಮಾಣದಲ್ಲಿ ಮೀನುಗಳಿರುವ ಈ ತಾಣವನ್ನು ಮತ್ಸ್ಯ ತೀರ್ಥ ಎಂದೂ ಕರೆಯಲಾಗುತ್ತದೆ.

ದುರಂತವೆಂಬಂತೆ 1996ರಲ್ಲಿ ಕಪಿಲಾ ನದಿಯಲ್ಲಿ ಮೀನುಗಳು ಏಕಾಏಕಿ ಸಾಮೂಹಿಕವಾಗಿ ಸಾವನ್ನಪ್ಪಿದವು. ತುಳು ಭಾಷೆಯಲ್ಲಿ 'ಪೇರು ಬೈಲು' ಎಂದು ಕರೆಯುವ ಮಹಾಸೀರ್ ಮೀನುಗಳನ್ನು ಕೊಲ್ಲಲು ಕಿಡಿಗೇಡಿಗಳು ಉದ್ದೇಶಪೂರ್ವಕವಾಗಿ ನದಿಗೆ ವಿಷ ಬೆರೆಸಿದ ಕಾರಣದಿಂದ ಈ ಕಹಿ ಘಟನೆ ಸಂಭವಿಸಿತು. ಈ ದುರಂತದಲ್ಲಿ ಮಡಿದ ಮತ್ಸ್ಯಗಳ ಮೇಲಿನ ಪ್ರೀತಿಯ ದ್ಯೋತಕವಾಗಿ ಸ್ಥಳೀಯ ಭಕ್ತರಿಲ್ಲಿ ಅವುಗಳಿಗಾಗಿಯೇ ಶಿಲೆಯಲ್ಲಿ ಕೆತ್ತಿರುವ ವಿಶೇಷ ಸ್ಮಾರಕವೊಂದನ್ನು ನಿರ್ಮಿಸಿದ್ದಾರೆ. ಈ ಘಟನೆಯ ಬಳಿಕ ಗ್ರಾಮಸ್ಥರಿಂದ 'ಮತ್ಸ್ಯ ಸಂರಕ್ಷಣಾ ವೇದಿಕೆ'ಯು ಸ್ಥಾಪಿಸಲ್ಪಟ್ಟು ಮತ್ಸ್ಯ ತೀರ್ಥದ ಆಸುಪಾಸಿನ 2 ಕಿ.ಮೀ. ವ್ಯಾಪ್ತಿಯಲ್ಲಿ ಮೀನುಗಾರಿಕೆಯನ್ನು ನಿಷೇಧಿಸಲಾಗಿದೆ. ಪ್ರಸಿದ್ಧ ಪುಣ್ಯಕ್ಷೇತ್ರ ಧರ್ಮಸ್ಥಳದಿಂದ ಇದು 32 ಕಿ.ಮೀ. ದೂರದಲ್ಲಿದೆ. ಸುಮಾರು 700 ವರ್ಷಗಳ ಇತಿಹಾಸವಿರುವ ಶಿಶಿಲೇಶ್ವರ ದೇವಾಲಯದಲ್ಲಿ ಪೂಜಿಸಲ್ಪಡುವ ಶಿವಲಿಂಗವು ಮಾನವ ನಿರ್ಮಿತಿಯಾಗಿರದೆ ಉದ್ಭವ ಮೂರ್ತಿಯಾಗಿದ್ದು ಬಲು ಕಾರಣಿಕವೆಂಬ ಪ್ರತೀತಿಯಿದೆ.

**–ರಮಣ್ ಶೆಟ್ಟಿ ರೆಂಜಾಳ್, ಮುಂಬೈ**





## ಶಾರದಮ್ಮನ ಹಿತ್ತಲ ಗಿಡದ ಮದ್ದು

ಇವರು ಶಾರದಮ್ಮ. ಆಗುಂಬೆ ಸಮೀಪದ ಅಗಸರಕೋಣೆ ಎನ್ನುವ ಪುಟ್ಟ ಊರಿನವರಾದ ಇವರು, ನಿಸ್ವಾರ್ಥದಿಂದ ಸೇವೆ ಸಲ್ಲಿಸುವ ನಾಟಿವೈದ್ಯೆ. ಮಲೆನಾಡಿನ ಕಾಡಿನಲ್ಲಿ ಸಿಗುವ ಅನೇಕ ಸಸ್ಯಗಳನ್ನು ಉಪಯೋಗಿಸಿಕೊಂಡು ಔಷಧಿಯನ್ನು ತಯಾರಿಸಿ, ಅದನ್ನು ಆರೋಗ್ಯ ಸಮಸ್ಯೆವುಳ್ಳವರಿಗೆ ನೀಡುತ್ತಾರೆ. ವಿಷಕಾರಿ ಹಾವು ಕಡಿತಕ್ಕೆ ಇವರು ಕೊಡುವ ಔಷಧಿ ಪರಿಣಾಮಕಾರಿಯಾಗಿ ಕೆಲಸ ಮಾಡಿದೆ ಎಂಬುದು ಸ್ಥಳೀಯರ ಮಾತು. ಸ್ತ್ರೀ ಸಂಬಂಧಿ ಕಾಯಿಲೆಗಳಿಗೆ ನಾಟಿ ಔಷಧಿ ಕೊಡುವುದರಲ್ಲಿ ಇವರು ಸಿದ್ಧಹಸ್ತರು. 75 ವರ್ಷ ವಯಸ್ಸಿನ ಇವರಲ್ಲಿ, ವಯೋಸಹಜವಾಗಿ ಮೈಯಲ್ಲಿ ಶಕ್ತಿ ಕಡಿಮೆಯಾದರೂ ತಮ್ಮ ಕಾಯಕದ ಬಗೆಗಿನ ಉತ್ಸಾಹ ಕ್ಷೀಣಿಸಿಲ್ಲ. ಮಕ್ಕಳ ಸಹಾಯದಿಂದ ಸಸ್ಯಗಳನ್ನು ತರಿಸಿಕೊಂಡು ಔಷಧಿ ತಯಾರಿಸಿ ಕೊಡುತ್ತಾರೆ.

ವ್ಯಾಪಾರೀ ಮನೋಭಾವದಿಂದಲ್ಲದೆ ಜನರು ಕೊಟ್ಟಷ್ಟು ಹಣದಲ್ಲಿ ತೃಪ್ತಿ ಪಡುತ್ತಿರುವ ಇವರ ಸೇವೆಯನ್ನು ಗುರುತಿಸಿ ಸ್ಥಳೀಯ ಸಂಸ್ಥೆಗಳು ಗೌರವಿಸಿವೆ. ಬೆಂಗಳೂರಿನ 'ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ'ಯಲ್ಲಿ ನಡೆದ ಕಾರ್ಯಕ್ರಮದಲ್ಲಿ, ನಾಟಿವೈದ್ಯ ಲೋಕದ ತಮ್ಮ ಅನುಭವಗಳನ್ನು ನೂರಾರು ಪ್ರತಿಷ್ಠಿತರ ಸಮ್ಮುಖದಲ್ಲಿ ಹಂಚಿಕೊಂಡಿದ್ದರು. ಅದಕ್ಕಾಗಿ ಅರಣ್ಯ ಇಲಾಖೆ ಅವಕಾಶ ಮಾಡಿಕೊಟ್ಟಿತ್ತು.

**–ಜಯಂತಿ ರಾಘವೇಂದ್ರ, ಆಗುಂಬೆ**





